# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ ದಿನಾಂಕ : DATE : 30/05/2019


# ಮಾಜಿ ಶಾಸಕ ಮುತ್ತಿನಪೆಂಡಿಮಠ ನಿಧನ

30-5-19

ಸಂ.ಕ. ಸಮಾಚಾರ ಗದಗ

ಭಾರತೀಯ ಜನತಾ ಪಕ್ಷದ ಹಿರಿಯ ಧುರೀಣ, ಮಾಜಿ ಶಾಸಕ ಚನ್ನವೀರಯ್ಯ ಶಾಂತಯ್ಯ ಮುತ್ತಿನಪೆಂಡಿಮಠ (93) ಬುಧವಾರ ನಿಧನರಾದರು. ಅವರಿಗೆ ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರಿದ್ದಾರೆ.



ಅವರು ಕಳೆದ ಕೆಲ ವರ್ಷಗಳಿಂದ ವಯೋಸಹಜ ಅನಾರೋಗ್ಯಪೀಡಿತರಾಗಿ ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದರು.

ದಿವಂಗತರು 1978ರಲ್ಲಿ ಜನತಾ ಪಕ್ಷದಿಂದ ಅಂದಿನ ಸಚಿವ ದಿ.ಕೆ.ಎಚ್.ಪಾಟೀಲರನ್ನು ಪರಾಭವಗೊಳಿಸಿ ಪ್ರಥಮ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದ್ದರು. ನಂತರ 1982ರಲ್ಲಿ ಸಿ.ಎಸ್.ಮುತ್ತಿನಪೆಂಡಿಮಠ ಜನತಾ ಪಕ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ಪಕ್ಷಾಂತರಗೊಂಡು ಶಾಸಕರಾಗಿ ಚುನಾಯಿತಗೊಂಡಿದ್ದರು. ದಿವಂಗತರು ಬೆಳಗಾವಿಯ ಕಾಡಾ ಅಧ್ಯಕ್ಷರಾಗಿ, ವಿಧಾನಸಭೆಯ ಭರವಸೆಗಳ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಪ್ರಧಾನಿ ನರೇಂದ್ರ ಮೋದಿ, ದಿ.ಅನಂತಕುಮಾರ, ಮಾಜಿ ಮುಖ್ಯಮಂತ್ರಿಗಳಾದ ದಿ.ಆರ್.ಗುಂಡೂರಾವ್, ದಿ.ರಾಮಕೃಷ್ಣ ಹೆಗಡೆ, ದಿ.ಎಸ್.ಆರ್.ಬೊಮ್ಮಾಯಿ, ದಿ.ಜೆ.ಎಚ್.ಪಟೇಲ, ದಿ.ಎಸ್.ಬಂಗಾರಪ್ಪ, ಹುಲಕೋಟಿಯ ಹುಲಿಯೆಂದೇ ರಾಜಕಾರಣದಲ್ಲಿ ಹೆಸರಾಗಿದ್ದ ದಿ.ಕೆ.ಎಚ್.ಪಾಟೀಲ, ಬಿ.ಎಸ್.ಯಡಿಯೂರಪ್ಪ, ಬಿಜೆಪಿಯ ಹಿರಿಯ ಧುರೀಣರುಗಳಾದ ಸಿ.ಎಂ.ಉದಾಸಿ ಮುಂತಾದವರೊಂದಿಗೆ ಅತ್ಯಂತ ನಿಕಟ ಸಂಪರ್ಕ ಹೊಂದಿದ್ದರು.

ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದ್ದ ಮಾಜಿ ಶಾಸಕ: ಮಾಜಿ ಶಾಸಕ ಸಿ.ಎಸ್.ಮುತ್ತಿನಪೆಂಡಿಮಠ ಈಚಿನ ಲೋಕಸಭಾ ಚುನಾವಣೆಯಲ್ಲಿ ಕುಟುಂಬ ಸಮೇತರಾಗಿ ಮತಗಟ್ಟೆಗೆ ಆಗಮಿಸಿ ಮತಚಲಾಯಿಸಿದ್ದರು.